ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE : 23/3/2021

# ಸದನದಲ್ಲಿ ಪ್ರತಿಧ್ವನಿ

ಸಂಯುಕ್ತ ಕರ್ನಾಟಕ

ವಿಧಾನಸಭೆ: 'ಸತ್ಯವಂತರಿಗಿದು ನಿಜಕ್ಕೂ ಕಾಲವಲ್ಲ ಸ್ವಾಮಿ' ಎಂಬ ಶೀರ್ಷಿಕೆಯುಳ್ಳ ಸಂಯುಕ್ತ ಕರ್ನಾಟಕ ಪತ್ರಿಕೆಯು ಸೋಮವಾರ ಪ್ರಕಟಿಸಿದ ಜನಾಭಿಪ್ರಾಯದ ಕುರಿತಂತೆ ವಿಧಾನಸಭೆಯ ಕಲಾಪದಲ್ಲಿ ಸೋಮವಾರ ಪ್ರಸ್ತಾಪಗೊಂಡು ಮೆಚ್ಚುಗೆಗೆ ಪಾತ್ರವಾಯಿತು. ಮಾಜಿ ಸಚಿವ ರಮೇಶ್ ಜಾರಕಿಹೊಳಿ ಭಾಗಿಯಾಗಿದ್ದಾರೆನ್ನಲಾದ ಸಿಡಿ ಹಗರಣದ ಕುರಿತು ಕೆಳಮನೆಯಲ್ಲಿ ನಡೆದ ಚರ್ಚೆಯ ವೇಳೆ ಕಾಂಗ್ರೆಸ್‌ನ ಹಿರಿಯ ನಾಯಕ ಎಚ್.ಕೆ.ಪಾಟೀಲ್ ಅವರು ಪತ್ರಿಕೆಯ ವರದಿಯನ್ನು ಪ್ರಸ್ತಾಪಿಸುತ್ತಾ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು. ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ವೈಯಕ್ತಿಕ ತೇಜೋವಧೆಯಾಗುವಂತಹ ವರದಿಗಳನ್ನು ಪ್ರಸಾರ ಮಾಡದಂತೆ ಮಾಧ್ಯಮಗಳಿಗೆ ತಡೆ ನೀಡಬೇಕೆಂದು ಕೋರಿ ಆರು ಸಚಿವರು ಉಚ್ಚ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ತಡೆ ಪಡೆದ ವಿಷಯದ ಕುರಿತು ಸಾರ್ವಜನಿಕರ ಅಭಿಪ್ರಾಯವನ್ನು ದಾಖಲಿಸಿದ್ದನ್ನು ಎಚ್.ಕೆ.ಪಾಟೀಲರು ಪ್ರಸ್ತಾಪಿಸಿದರು. ಎರಡನೇ ಕಂತಿನಲ್ಲಿ ಚಂದ್ರಶೇಖರ ಬೆಳವಾಡಿ ಎಂಬುವರು ಚೆನ್ನಾಗಿ ಬರೆದಿದ್ದಾರೆ. ಇವರು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರ ಕಚೇರಿ ಸಿಬ್ಬಂದಿ ಆಗಿದ್ದಾರೆ ಎಂದು ಬರೆಯಲಾಗಿದೆ. ಹೀಗಾಗಿ ಇವರ ಅಭಿಪ್ರಾಯ ನಿಮ್ಮ (ಬಿಜೆಪಿ) ಪಕ್ಷದ ನಿಲುವಾಗಬೇಕು. ಪತ್ರಿಕೆ ಈ ದಿಸೆಯಲ್ಲಿ ನಡೆಸಿರುವ ಅಭಿಯಾನ ಅನುಕರಣೀಯ ಎಂದು ಎಚ್.ಕೆ.ಪಾಟೀಲ ಪ್ರಶಂಸೆ ವ್ಯಕ್ತಪಡಿಸಿದರು.

